ಓ ಎಸ್ ನಂಃ 31–2015

ಪಿ ಡಬ್ಲ್ಯೂಃ 3

(ಸಾಕ್ಷಿಯನ್ನು ಪುನಃ ಕರೆಯಿಸಿ ದಿನಾಂಕ 28–08–2018 ರಂದು ಪ್ರಮಾಣ ವಚನ ಮಾಡಿಸಲಾಯಿತು.)

**ಪಾಟೀ ಸವಾಲುಃ ಶ್ರೀಮತಿ ಎಸ್ ಎನ್ ಹೆಚ್ ವಕೀಲರಿಂದಃ** 3ನೇ ವಾದಿ ನನ್ನ ತಂಗಿಯ ಗಂಡ ಇರುತ್ತಾನೆ. ನನ್ನ ಹಾಗೂ 1ನೇ ವಾದಿಯ ಮನೆಯ ನಡುವೆ ಎರಡು ಮನೆ ಇರುತ್ತವೆ. ನನ್ನ ಪ್ರಕಾರ ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಇರುವ ಬಾವಿಯಲ್ಲಿ ನಾನು ನೀರನ್ನು ಉಪಯೋಗಿಸಿರುವುದಿಲ್ಲ. ನನ್ನ ಪ್ರಕಾರ ಬಾವಿಗೆ ಪಂಪು ಹಾಕಿ 15 ವರ್ಷ ಆಗಿರಬಹುದು. ಸದರ ಬಾವಿಗೆ ಅರ್ಧ ಇಂಚು ಹೆಚ್‌ಪಿ ಪಂಪ್‌ನ್ನು ಹಾಕಿರುತ್ತಾರೆ. ವಾದಿ ಮತ್ತು ಪ್ರತಿವಾದಿಯರ ಮಧ್ಯೆ ನಾಗರ ಕಟ್ಟೆ ಬಾವಿ ಹತ್ತಿರ ಇದೆ ಎಂದರೆ ನಿಜ. ನಾಗರ ಕಟ್ಟೆ ವಾದಿ ಮತ್ತು ಪ್ರತಿವಾದಿಯರ ಜಮೀನಿನ ಮಧ್ಯೆ ಇಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ 1ನೇ ವಾದಿಯ ಮನೆ ಕಡೆ ಇರುತ್ತದೆ. 1 ನೇ ಪ್ರತಿವಾದಿಯ ಮನೆ ಪಶ್ಚಿಮ ದಿಕ್ಕಿಗೆ ಮುಖ ಮಾಡಿ ಇದೆ ಎಂದರೆ ನಿಜವಲ್ಲ. ನಾಗರಕಟ್ಟೆ 1ನೇ ಪ್ರತಿವಾದಿಯ ಮನೆಗೆ ಮುಖ ಮಾಡಿ ಇದೆ ಎಂದರೆ ನಿಜವಲ್ಲ. ನಾಗರಕಟ್ಟೆ 1 ನೇ ಪ್ರತಿವಾದಿಯ ಜಮೀನಿನಲ್ಲಿ ಇದೆ ಎಂದರೆ ನನಗೆ ನೆನಪಿರುವುದಿಲ್ಲ.

(2) ಸಾಮಾನ್ಯವಾಗಿ ನಾಗರ ಪಂಚಮಿಯಲ್ಲಿ ಎಲ್ಲರೂ ನಾಗರಕಟ್ಟೆಗೆ ಪೂಜೆ ಮಾಡುತ್ತಾರೆ ಎಂದರೆ ನಿಜ. ಅದರ ಪ್ರಕಾರ ಎಲ್ಲಾ ಸಮಯದಲ್ಲಿ ಪೂಜೆ ಮಾಡುತ್ತಾರೆ ಎಂದರೆ ನಿಜ. ನಾವು ಸಹ ವಾದಿ ಮತ್ತು ಪ್ರತಿವಾದಿಯರ ನಾಗರಕಟ್ಟೆಗೆ ಹೋಗುತ್ತೇವೆ ಎಂದರೆ ನಿಜವಲ್ಲ. ಸದರಿ ನಾಗರಕಟ್ಟೆಯನ್ನು ಯಾವಾಗ ಮತ್ತು ಯಾರು ಕಟ್ಟಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ನಾಗರಕಟ್ಟೆಯ ನಿತ್ಯದ ಪೂಜೆಯನ್ನು ಪ್ರತಿವಾದಿಯರೇ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಸ್ವತಃ ಹೇಳುತ್ತಾರೆ ಮೊದಲು ಅನಂತ ಕಲ್ಲು ನಾಯ್ಕ ಮಾಡುತ್ತಿದ್ದರು, ದಾವೆ ಆದ ನಂತರ ಪ್ರತಿವಾದಿಯರು ಮಾಡುತ್ತಿದ್ದಾರೆ. ನಾನು 3ನೇ

ವಾದಿಯ ಸಂಬಂಧಿಕ ಆಗಿರುವುದರಿಂದ ವಾದಿಯರಿಗೆ ಅನುಕೂಲ ಆಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ನಿಜವಲ್ಲ. ಅನಾದಿಕಾಲದಿಂದ ಪ್ರತಿವಾದಿಯರೇ ನಾಗರಕಟ್ಟೆಯನ್ನು ಪೂಜೆ ಮಾಡಿಕೊಂಡು ಬಂದಿದ್ದಾರೆ ಎಂದರೆ ನಿಜವಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಖ್ತಲೇಖನದಲ್ಲಿ ಬೆರಳಚ್ಚಿಸಲಾಯಿತು)

ಓ.ಹೆ.ಕೆ. ಸರಿ ಇದೆ.

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,
ಅಂಕೋಲಾ.